ಪೋಲೀಸರೂ ನಿಷ್ಕ್ರಿಯರಾಗಿದ್ದಾರೆ. ಯಾಕೆಂದರೆ ಲೈಸನ್ಸ್ ಹೊಂದಿದವರ ಪ್ರಭಾವ ಪ್ರಬಲವಾಗಿ ಸಾರಾಯಿ, ಬ್ರಾಂದಿ ಕಳುವಿನಿಂದ ಮಾರುವುದು ನಿಂತಿಲ್ಲ. ಆ ಕಾರಣದಿಂದ ಬೇಸತ್ತ ಸಂಘಟನೆಗಳು ಕಣ್ಣಿದ್ದು ಕುರುಡರಂತೆ ಇದ್ದೇವೆ. ಆದ್ದರಿಂದ ಮಾನ್ಯರೇ ದಯಾಳಾದ ತಾವು ಈ ಮೇಲೆ ಕಾಣಿಸಿದ ನಮ್ಮ ಎಲ್ಲಾ ಬೇಡಿಕೆಗಳನ್ನು 15 ದಿವಸದೊಳಗೆ ಈಡೇರಿಸಿ ನಮ್ಮ ಗ್ರಾಮದಲ್ಲಿರುವ ಸರ್ಕಾರಿ ಸಾರಾಯಿ, ಬ್ರಾಂದಿ ಮಾರಾಟ ರದ್ದುಮಾಡಿ ಹಮ್ಮಿಗಿ ಗ್ರಾಮವನ್ನು ಮದ್ಯಪಾನಮುಕ್ತ ಗ್ರಾಮವೆಂದು ಘೋಷಿಸಲು ವಿನಂತಿಸುತ್ತೇವೆ. ಒಂದು ವೇಳೆ ನೀವು ಹೀಗೆ ಮಾಡದೇ ಇದ್ದರೆ ಉಪವಾಸ ಸತ್ಯಾಗ್ರಹ ಹೋರಾಟ ಪ್ರಾರಂಭಿಸುತ್ತೇವೆ."

ಎಂದು ಹೇಳಿದ್ದಾರೆ, ಸರ್ಕಾರದವರು ಲಿಲಾವು ಮಾಡಿಬಿಡುತ್ತೀರಿ ಮತ್ತೆ ಅವರು ರಕ್ಷಣೆ ಕೊಡು ಅಂತ ಡಿಸಿಯವರ ಹತ್ತಿರ ಹೋಗುತ್ತಾರೆ. ಮತ್ತೆ ಹೆಣ್ಣುಮಕ್ಕಳಿಗೆ ಜೈಲಿಗೆ ಹಾಕುತ್ತೀರೋ? ನನ್ನ ವಿನಂತಿ ಏನೆಂದರೆ ತಕ್ಷಣದಲ್ಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಆ ಗ್ರಾಮಕ್ಕೆ ಭೇಟಿ ಕೊಡಬೇಕು. ಮಾನ್ಯ ಗೃಹ ಸಚಿವರು ಅಲ್ಲಿಗೆ ಹೋಗಬೇಕು. ಅಲ್ಲಿಯ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕಾಗುತ್ತದೆ. ಆ ಗ್ರಾಮದ ಮಹಿಳೆಯರೆಲ್ಲ ಬಹಳ ಕಷ್ಟದಲ್ಲಿ ಬೆಂದಿದ್ದಾರೆ. ಗುಡಂದಿರು ಹೆಂಡತಿಯರಿಗೆ ದಿನಾ ಬಡಿಯುತ್ತಾರೆ, ನೋವಾಗುತ್ತದೆ ದಿನಾ ಕುಡಿಯುವುದು, ಹೋಗುವುದು, ಬಡಿಯುವುದು. ಆದರೂ ಬಗ್ಗಿಲ್ಲ ಅವರು. ಏನಾದರೂ ಸರಿ, ನಾವು ಬೇಕಾದರೆ ಪ್ರಾಣ ಕಳೆದುಕೊಳ್ಳುತ್ತೇವೆ ಎನ್ನುತ್ತಾರೆ. ಆದ್ದರಿಂದ ತಕ್ಷಣ ಸರ್ಕಾರ ಆ ಗ್ರಾಮ ಮದ್ಯಮುಕ್ತ ಎಂದು ಡಿಕ್ಲೇರ್ ಮಾಡಬೇಕು, ಮಹಿಳೆಯರಿಗೆಲ್ಲ ರಕ್ಷಣೆ ಕೊಡಬೇಕು.

*(vii) ರಾಜ್ಯದಲ್ಲಿ ದುರ್ಬಲರಿಗೆ ಸರ್ಕಾರದಿಂದ ನೀಡುವ ಸಬ್ಸಿಡಿ ಹಣ ದುರುಪಯೋಗಪಡಿಸಿಕೊಳ್ಳುತ್ತಿರುವುದು.*

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಸರ್ಕಾರ ಕೊಡುವ ಟ್ರಾಕ್ಟರ್, ಹೊಲಿಗೆ ಮೆಷಿನುಗಳು ಮತ್ತೆ ತೆಂಗಿನ ಸಸಿ ಹಾಗೂ ಇತರೆ ಮರ ಗಿಡ ಸಸಿ ಕೊಡಲಾಗುತ್ತದೆ. ಇಲ್ಲಿ ಕೊಡುತ್ತೇವೆ, ಅಲ್ಲಿ ಮಾರಿಕೊಳ್ಳುತ್ತಾರೆ. ಹಿಂದೆ ಎಸ್ಸಿ/ಎಸ್ಟಿ ಜನರಿಗೆ ಜಮೀನ ಕೊಟ್ಟಾಗ ಅದನ್ನು ವಾಪಸ್ ತೆಗೆದುಕೊಂಡು ಸರ್ಕಾರ ಹೇಗೆ ವಹಿಸಿಕೊಂಡಿತ್ತೋ ಅದೇ ರೀತಿ ಒಂದು ಕಾನೂನು ಮಾಡದೇ ಹೋದರೆ ನಾವೇನು 15 ಸಾವಿರ ಸಬ್ಸಿಡಿ ಕೊಡುತ್ತೇವೆ ಅದರ ಸದುಪಯೋಗವಾಗುವುದಿಲ್ಲ ಮತ್ತು ಅದನ್ನು ಮಾರಿಬಿಡುತ್ತಾರೆ. ಕೊನೆಯ ಪಕ್ಷ ಈ ಬಗ್ಗೆ ಒಂದು ನಿಬಂಧನೆ ಹಾಕಬೇಕು. ಆವರದನ್ನು ಯಾರು ಕೊಳ್ಳುವನೋ ಅವನಿಂದ ಅದನ್ನು ಸರ್ಕಾರ ವಾಪಸ್ ಪಡೆದುಬಿಡಬೇಕು. ನಾವು

ಹಾಗೆ ಮಾಡದೇ ಹೋದರೆ ಎಸ್‌ಸಿ/ಎಸ್‌ಟಿ, ಹಿಂದುಳಿದವರಿಗೆ ಕೊಟ್ಟ ಸಬ್ಸಿಡಿ ದುರುಪಯೋಗವಾಗುತ್ತದೆ. ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಸಮಾಜದ ಬಗ್ಗೆ ಅತ್ಯಂತ ಕಾಳಜಿ ಇದೆ. ಹಾಗೇ ಮಾನ್ಯ ಜಯಚಂದ್ರರೂ ಇದ್ದಾರೆ. ನಾವು ಕೊಟ್ಟ ಸವಲತ್ತುಗಳನ್ನು ಆ ಜನರು ಉಪಯೋಗಿಸುತ್ತಲೇ ಇಲ್ಲ. ಅವರಿಂದ ಕೊಳ್ಳುವವರ ಕ್ರಿಮಿನಲ್ ಕೇಸ್ ಹಾಕಬೇಕು. ಈಗ 'ಕೊಟ್ಟವನು ಕೋಡಂಗಿ, ಈಸ್ಕೊಂಡೋನು ಈರಭದ್ರ' ಎಂಬ ಪರಿಸ್ಥಿತಿಯಾಗಿದೆ. ದುರ್ಬಲರಿಗೆ ಕೊಟ್ಟ ಸೌಲಭ್ಯಗಳು ದುರುಪಯೋಗವಾಗುತ್ತಿರುವುದು ವಿಷಾದಕರ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿದೆ. ಇದಕ್ಕೆ ಕಾನೂನು ತರಲೇಬೇಕಾಗುತ್ತದೆ, ಇಲ್ಲದಿದ್ದರೆ ರಾಜ್ಯ, ಕೇಂದ್ರ ಸರ್ಕಾರದ ಸಬ್ಸಿಡಿ ಹಣ ದುರುಪಯೋಗವಾಗುತ್ತದೆ. ಆದ್ದರಿಂದ ಈಗಾಗದಿದ್ದರೂ ಮುಂದಿನ ಜನವರಿಯಲ್ಲಾದರೂ ಈ ಬಗ್ಗೆ ಕಾನೂನು, ರೂಲ್ಸ್ ತರಲೇಬೇಕಾಗುತ್ತದೆ. ನಮ್ಮ ತಾಲೂಕಿನಲ್ಲೇ 15-20 ಲಕ್ಷ ಸಬ್ಸಿಡಿ ಕೊಡುತ್ತೇವೆ, ಅಷ್ಟು ಹಣದಿಂದ ಅಭಿವೃದ್ಧಿ ಕೆಲಸ ಮಾಡಲು ಆಗುವುದಿಲ್ಲ. ಇನ್ನೊಂದು ವಿಚಾರ ಹೇಳುತ್ತೇನೆ, ಪಕ್ಕದಲ್ಲಿ ಬಾವಿ ತೆಗೆದುಕೊಳ್ಳುತ್ತಾರೆ ಬೇರೆಯವರ ಕೈಲಿ ಹೊಡೆಸಿಕೊಳ್ಳುತ್ತಾರೆ. ಈ ಹಿನ್ನಲೆಯಲ್ಲಿ ಸಮಾಜ ಕಲ್ಯಾಣ ಸಚಿವರು ಒಂದು ಕಾನೂನು ತಂದರೆ ಅದು ಇತಿಹಾಸ ತೀರ್ಮಾನವಾಗುತ್ತದೆ. ಅದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆಲ್ಲ ಅನುಕೂಲವಾಗುತ್ತದೆ. ಈಗ ತಾವು ಈ ಬಗ್ಗೆ ಒಂದು ಹೇಳಿಕೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸಂಪೂರ್ಣ ಸತ್ಯವಿದೆ. ದುರ್ಬಲರಿಗೆ ಕೊಟ್ಟ ಸವಲತ್ತನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದೆಂಬುದು ಸರ್ಕಾರದ ನೀತಿ. ಅದಕ್ಕೆ ಕಾನೂನಿನ ಅಗತ್ಯವಿದ್ದರೆ ಖಂಡಿತವಾಗಿ ನಾವು ಅದನ್ನು ಜಾರಿಗೆ ತರುತ್ತೇವೆ.

*(viii) ರಾಜ್ಯದಲ್ಲಿನ ಶ್ರೀಗಂಧ ಕುಶಲಕರ್ಮಿಗಳ ಕುರಿತು.*

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :— ಮಾನ್ಯ ಅಧ್ಯಕ್ಷರೇ, ಈ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ಶ್ರೀಗಂಧ ಕುಶಲಕರ್ಮಿಗಳು, ವಿಶೇಷವಾಗಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಯಾರಿದ್ದಾರೆ ಅವರು ಇದನ್ನು ಜೀವನದ ಕಸುಬನ್ನಾಗಿ ಮಾಡಿಕೊಂಡವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸಾವಿರಾರು ಕುಟುಂಬಗಳು ವಂಶಪಾರಂಪರ್ಯವಾಗಿ ಇದನ್ನೇ ಮಾಡಿಕೊಂಡು ಬಂದಿವೆ. ಅವರ ಕುಟುಂಬಗಳೇ ಕೆತ್ತನೆಯ ಕೆಲಸದ ಮೇಲೆ ಅವಲಂಬಿಸಿವೆ. 1976ರಿಂದ ರಾಜ್ಯ ಸರ್ಕಾರ ಅವರಿಗೆ ಕೆತ್ತನೆಗೆ ಬೇಕಾದ ಗಂಧದ ತುಂಡುಗಳನ್ನು ಕೊಡುತ್ತಾ ಇತ್ತು. ಗಂಧದ ಮರ ಇರದಿದ್ದರೆ, ಶಿವನೇ, ತೇಗ ಅಥವಾ ಬೀಟೆ ಮರಗಳನ್ನಾದರೂ ಕೊಡುತ್ತಿತ್ತು. ಒಂದು ಕುಟುಂಬಕ್ಕೆ ತಿಂಗಳಿಗೆ ಒಂಬತ್ತೂವರೆ